5C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ
ಎಸ್.ಸಿ. ನಂ. 172/2022

ದಿನಾಂಕ ಃ 22.11.2024 ರಂದು ಪ್ರಮಾಣ ವಚನ ಬೋದಿಸಲಾಗಿದೆ.

ಸಿ. ಡಬ್ಲ್ಯೂ: 3 ಪಿ. ಡಬ್ಲ್ಯೂ:2

| | |
|---|---|
| ಸಾಕ್ಷಿದಾರರ ಹೆಸರು | ಶಿವಣ್ಣ |
| ತಂದೆಯ ಹೆಸರು | ಕುಳ್ಳಯ್ಯ |
| ವಯಸ್ಸು | 64 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ನೆಟ್ಕಲ್, ಮಳವಳ್ಳಿ ತಾ. |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1) ಜೋಗಯ್ಯ ರವರ ಮಗ ಸಿದ್ದೇಗೌಡ ಅಲಿಯಾಸ್ ಸಿದ್ದಯ್ಯ ಗೊತ್ತು. ಚಾಸಾ.1-ಸಿದ್ದರಾಜು ಮತ್ತು ಮೃತೆ ಮಹದೇವಮ್ಮ ಗೊತ್ತು. ಚಾಸಾ.2 ಮಹದೇವಮ್ಮ, ನನ್ನ ಹೆಂಡತಿ. ಚಾಸಾ.4 ಮತ್ತು ಚಾಸಾ.5 ಗೊತ್ತು, ಅವರು ಆರೋಪಿಯ ಸಂಬಂಧಿಕರು. ಚಾಸಾ.6 ಸವಿತಾ - ಆರೋಪಿಯ ಮಗಳು. ಚಾಸಾ.11 - ಮನು ಕುಮಾರ್ ಮತ್ತು ಚಾಸಾ.12 – ನಾರಾಯಣ ಗೊತ್ತಿಲ್ಲ.

2) ಸಿದ್ದೇಗೌಡರ ಹೆಂಡತಿಯಾದ ಮಹದೇವಮ್ಮ ನವರು, ಮೃತ ಪಟ್ಟು 2 ವರುಷ, 3 ತಿಂಗಳು ಆಗಿರುತ್ತದೆ. ರಾತ್ರಿ 7 ರಿಂದ 7.30 ಗಂಟೆ ಸಮಯವಾಗಿತ್ತು, ಆಗ ಸುಮಾರು ಜನರು ಬಂದು, ಸಿದ್ದಯ್ಯ ನ ಮನೆ ಹತ್ತಿರ ಬಂದಿದ್ದರು, ಅಲ್ಲಿ ಇದ್ದ ಜನರನ್ನು, ಯಾಕೆ ಈಗೆ ನಿಂತಿದ್ದಿರಾ ಎಂದು ಕೇಳಿದಾಗ, ಜನರು, ಸೀಮೆಎಣ್ಣೆ ಉಯ್ದುಬಿಟ್ಟು, ಬೆಂಕಿ ಹಾಕಿಬಿಟ್ಟಿದ್ದಾನೆ ಅವನ ಹೆಂಡತಿಗೆ ಅಂತ ಜನಗಳು ಹೇಳಿದರು. ಅವಳ ಗಂಡ ಸಿದ್ದಯ್ಯ, ಅವನ ಹೆಂಡತಿಗೆ ಸೀಮೆಎಣ್ಣೆ ಉಯ್ದುಬಿಟ್ಟು, ಬೆಂಕಿ ಹಾಕಿಬಿಟ್ಟಿದ್ದಾನೆ ಅಂತ ಹೇಳಿದರು. ಸಿದ್ದಯ್ಯನ ಹೆಂಡತಿ ಮಹದೇವಮ್ಮನಿಗೆ, ಮೈ ಮೇಲೆ ಎಲ್ಲೆಲ್ಲಿ ಗಾಯಗಳಾಗಿತ್ತು ಎಂದು ಗೊತ್ತಿಲ್ಲ. ನಾನು ಬಂದು ಕೇಳುವಷ್ಟರಲ್ಲಿ, ಆ್ಯಂಬುಲೆನ್ಸ್ ನಲ್ಲಿ ಮಹದೇವಮ್ಮನನ್ನು ಕರೆದುಕೊಂಡು ಹೋಗಿದ್ದರು. ಇನ್ನು ಬೇರೆ ಯಾರಿಗೆ

ಗಾಯ ಆಗಿತ್ತು ಎಂದು ಗೊತ್ತಿಲ್ಲ. ಚಾಸಾ.1 ಸಿದ್ದರಾಜು ಊರಿನಲ್ಲಿ ಇದ್ದರು. ಚಾಸಾ.2 ನನ್ನ ಹೆಂಡತಿ, ಮಹದೇವಮ್ಮ ರೊಂದಿಗೆ, ಆಸ್ಪತ್ರೆಗೆ ಹೋಗಿದ್ದರು. ನಾನು, ಚಾಸಾ.1 ರವರನ್ನು ವಿಚಾರಿಸಲಿಲ್ಲ. ಚಾಸಾ.2 ರವರನ್ನು, ಯಾಕೆ ಕಳುಹಿಸಿದ್ದೀರಿ ಎಂದು ಕೇಳಿದಾಗ, ಜನರು, ಮಹದೇವಮ್ಮ, ಆ್ಯಂಬ್ಯಲೆನ್ಸ್ ನ್ನು ಹತ್ತಿದ ಕೂಡಲೇ, ಚಾಸಾ.2 ರವರ ಸೀರೆಯನ್ನು ಹಿಡಿದುಕೊಂಡು ಬಾ ನನ್ನ ಜೊತೆಯಲ್ಲಿ ಅಂತ ಕರೆದುಕೊಂಡರು. ಈ ಘಟನೆ ಆಗಿದ್ದ, 15 ರಿಂದ 1 ತಿಂಗಳು ಆದ ಮೇಲೆ, ಮಹದೇವಮ್ಮ ತೀರಿಕೊಂಡರು.

3) ಪೊಲೀಸರು, ಮಹದೇವಮ್ಮ ನಿಗೆ ಬೆಂಕಿ ಹಾಕಿದ ಮಾರನೆಯ ದಿವಸ, ಆರೋಪಿ ಯ ಮನೆಗೆ ಸಂಜೆ 4.30 ಗಂಟೆಗೆ ಬಂದಿದ್ದರು. ಸ್ಥಳದಲ್ಲಿ ಪೊಲೀಸರು, ಸಂಜೆ 5.30 ಗಂಟೆ ವರೆಗೆ ಇದ್ದರು. ಸುಮಾರು 1 ಗಂಟೆ ಕಾಲ ಸ್ಥಳದಲ್ಲಿ ಪೊಲೀಸರು ಇದ್ದರು. ಪೊಲೀಸರು ನಮ್ಮ ಮನೆ ಹತ್ತಿರ ಬಂದು, ನನಗೆ ಬನ್ನಿ ಗೌಡರೇ ಎಂದು ಕರೆದರು. ಪೊಲೀಸರು, ಸ್ವಾಮಿಯನ್ನು ಸ್ಥಳಕ್ಕೆ ಕರೆದರು. ಸ್ಥಳದಲ್ಲಿ, ನಾನು, ಸ್ವಾಮಿ ಮತ್ತು ಪೊಲೀಸರು ಇದ್ದೆವು, ಬೇರೆ ಜನರು ಯಾರು ಇರಲಿಲ್ಲ. ಪೊಲೀಸರು ಊರಿಗೆ ಬಂದು, ಆರೋಪಿ ಸಿದ್ದೇಗೌಡರ ಮನೆ ಯಾವುದು ಎಂದು ಕೇಳಿದಾಗ, ಅಲ್ಲಿ ಅಕ್ಕ ಪಕ್ಕದಲ್ಲಿ ಇದ್ದ ಹೆಂಗಸರು, ಅರೋಪಿಯ ಮನೆಯನ್ನು ಪೊಲೀಸರಿಗೆ ತೋರಿಸಿದರು. ಪೊಲೀಸರು ಬಂದು ಸಿದ್ದೇಗೌಡ(ಆರೋಪಿ) ಮನೆ ಒಳಗಡೆ ಹೋಗಿ, ಮನೆ ಒಳಗೆ ಪರಿಶೀಲಿಸಿದರು, ಆಗ ನಾನು ಮನೆಯ ಹೊರಗಡೆ ಕುಳಿತಿದ್ದೆನು. ಪೊಲೀಸರು, ಸ್ಥಳದಿಂದ ಒಂದು ಬಟ್ಟೆ, ಒಂದು ದೊಣ್ಣೆಯನ್ನು ತೆಗೆದುಕೊಂಡರು. ಪೊಲೀಸರು, ನನಗೆ ಏನು ವಿಷಯವನ್ನು ತಿಳಿಸಲಿಲ್ಲ, ನೀವು ಮುಖಂಡರು ಒಂದು ಸಹಿ ಮಾಡಿ ಗೌಡ್ರೆ ಎಂದು ಹೇಳಿ, ನನ್ನ ಸಹಿಯನ್ನು ಮಾಡಿಸಿಕೊಂಡಿದ್ದರು. ನಂತರ ಪೊಲೀಸರು ನನಗೆ ಕೇಳಿದರು, ನನಗೆ ಏನು ಗೊತ್ತಿಲ್ಲ, ನಾನು ಬರುವಷ್ಟರಲ್ಲಿ ಆಯಮ್ಮನನ್ನು ತೆಗೆದುಕೊಂಡು ಹೊಗಿದ್ದರು ಎಂದು ಹೇಳಿದೆನು. ನಂತರ, ಘಟನೆ ಬಗ್ಗೆ ಏನಾಗಿತ್ತು ಎಂದು ನಾನು ತಿಳಿದುಕೊಳ್ಳಲಿಲ್ಲ.

4) ಪೊಲೀಸರು, ಮೇಲೆ ಹೇಳಿದ ವಸ್ತುಗಳನ್ನು, ಅವರ ಜೊತೆಯಲ್ಲಿ ತೆಗೆದುಕೊಂಡರು. ನಾನು ನೋಡುತ್ತಿರುವ ಪಂಚರ ನೋಟಿಸ್ ನಲ್ಲಿ ನನ್ನ ಸಹಿ ಇದ್ದು, ಪಂಚರ ನೋಟಿಸನ್ನು ನಿಪಿ.5 ಎಂದು, ನನ್ನ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ಮಹಜರ್ ನಲ್ಲಿ ನನ್ನ ಸಹಿ ಇದ್ದು, ಮಹಜರನ್ನು ನಿಪಿ.6 ಎಂದು, ನನ್ನ ಸಹಿಯನ್ನು ನಿಪಿ.6(ಎ)

ಎಂದು ಗುರುತಿಸಲಾಯಿತು. ಪೊಲೀಸರು ಮಹಜರ್ ಮಾಡಿದ ಸ್ಥಳದ ಸುತ್ತ ಮುತ್ತಾ, ದಕ್ಷಿಣಕ್ಕೆ ಃ ರಸ್ತೆ ಇದೆ, ಉತ್ತರಕ್ಕೆ ಃ ಜೋಗಯ್ಯನ ಮನೆ, ಪೂರ್ವ - ಪಶ್ಚಿಮಕ್ಕೆ ಃ ಉದ್ದದ ರಸ್ತೆ ಇದೆ.

5) ಈಗ ನಾನು ನೋಡುತ್ತಿರುವ ಫೋಟೋ ಒಂದರಲ್ಲಿ, ನಾನು, ನನ್ನ ಹೆಂಡತಿ (ಚಾಸಾ2), ಸ್ವಾಮಿ ಮತ್ತು ಪೊಲೀಸರು ಇದ್ದೇವೆ. ಸದರಿ ಫೋಟೋವನ್ನು ಸಿದ್ದಯ್ಯನ ಮನೆಯ ಹತ್ತಿರ, ಪೊಲೀಸರು ಮಹಜರ್ ಮಾಡಲು ಬಂದಿದ್ದಾಗ ತೆಗೆದಿದ್ದರು. ಸದರಿ ಫೋಟೋವನ್ನು ನಿಪಿ.7 ಎಂದು ಗುರುತಿಸಲಾಯಿತು. ಇನ್ನೊಂ ದು ಫೋಟೋದಲ್ಲಿ ನಾನು, ನನ್ನ ಹೆಂಡತಿ (ಚಾಸಾ2), ಸ್ವಾಮಿ ಮತ್ತು ಪೊಲೀಸರು ಇದ್ದೇವೆ. ಸದರಿ ಫೋಟೋವನ್ನು, ಪೊಲೀಸರು ಮಹಜರ್ ಗೆ ಬಂದಿದ್ದಾಗ ಸಿದ್ದೇಗೌಡ (ಆರೋಪಿಯ) ಮನೆಯ ಒಳಗೆ ತೆಗೆದಿದ್ದರು. ಸದರಿ ಫೋಟೋವನ್ನು ನಿಪಿ.8 ಎಂದು ಗುರುತಿಸಲಾಯಿತು. ನಿಪಿ.8 ಫೋಟೋದಲ್ಲಿ, ನನ್ನ ಹೆಂಡತಿ (ಚಾಸಾ.2) ರವರು,ಪೊಲೀಸರಿಗೆ, ಇದೇ ಬಟ್ಟೆ ಎಂದು ಪೊಲೀಸರಿಗೆ ಕೈ ಯಿಂದ ತೋರಿಸುತ್ತಿದ್ದಾರೆ. ಪೊಲೀಸರು ಸ್ಥಳದಿಂದ ತೆಗೆದುಕೊಂಡಿದ್ದ ದೊಣ್ಣೆ ಮತ್ತು ಬಟ್ಟೆಯನ್ನು ಈಗ ನ್ಯಾಯಾಲಯದಲ್ಲಿ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುಮಾ.7 – 3 ಅಡಿ ಉದ್ದದ ಬಿದಿರು ದೊಣ್ಣೆಯನ್ನು ನೋಡಿ ಗುರುತಿಸಿರುತ್ತಾರೆ. ಮುಮಾ.7 ದೊಣ್ಣೆ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ರುಜು ಇದ್ದು, ಸಹಿಯನ್ನು ಮುಮಾ.7(ಎ) ಎಂದು ಗುರತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುಮಾ.3 - ಸೀರೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುಮಾ.5-ಲಂಗವನ್ನು ನೋಡಿ ಗುರುತಿಸಿರುತ್ತಾರೆ. ಮುಮಾ.3 ಮತ್ತು 5 ರ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ರುಜುಗಳು ಇದ್ದು, ಸಹಿಗಳನ್ನು ಮುಮಾ.3(ಎ) ಮತ್ತು ಮುಮಾ.5(ಎ) ಎಂದು ಗುರತಿಸಲಾಯಿತು.

6) ಘಟನೆಗೆ ಸಂಬಂಧಪಟ್ಟಂತೆ ನಾನು ನಾನು ಪೊಲೀಸ್ ಠಾಣೆ ಗೆ ಹೊಗಿರಲಿಲ್ಲ. ಮಹದೇವಮ್ಮ ತೀರಿ ಹೋದ ಮೇಲೆ, ನಾನು ಆಸ್ಪತ್ರೆಗೆ ಹೋಗಲಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ.

ಆರೋಪಿ ಸಿದ್ದೇಗೌಡನನ್ನು ಈಗ ನೋಡಿದರೆ ಗುರುತಿಸುತ್ತೇನೆ. ಆರೋಪಿಯನ್ನು ಈ ದಿವಸ ತೆರೆದ ನ್ಯಾಯಾಲಯಕ್ಕೆ ಕಾರಾಗೃಹದಿಂದ ಕರೆದುಕೊಂಡು ಬಂದಿರುವುದಿಲ್ಲ. ಆದ್ದರಿಂದ,

ಆರೋಪಿಯನ್ನು ಕಾರಾಗೃಹದ ವಿಸಿ ಮೂಲಕ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ಸಾಕ್ಷಿಯು ಆರೋಪಿಯನ್ನು ವಿಸಿ ಮೂಲಕ ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಸಾ.ಅ ರವರು ಸಾಕ್ಷಿ ಹೇಳಿಕೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದಾರೆ ಎಂದು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಗಿದೆ).

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

1) ಮಹದೇವಮ್ಮನವರಿಗೆ ಬೆಂಕಿ ಹಾಕಿದ ದಿನಾಂಕ 03.08.2022 ರಂದು ಎಂದರೆ ಸಾಕ್ಷಿಯು, ದಿನಾಂಕ ಗೊತ್ತಿಲ್ಲ ಎನ್ನುತ್ತಾರೆ. ಆ ದಿವಸ ರಾತ್ರಿ 7.00 ಗಂಟೆ ಸಮಯದಲ್ಲಿ, ನಾನು ಮತ್ತು ನನ್ನ ಹೆಂಡತಿ ಮನೆಯಲ್ಲಿ ಇದ್ದಾಗ, ಆರೋಪಿತರ ಮನೆಯಿಂದ ಜೋರಾಗಿ ಕಿರುಚಿಕೊಳ್ಳುವ ಶಬ್ದ ಕೇಳಿಸಿಕೊಂಡು, ನಾನು ಮತ್ತು ನನ್ನ ಹೆಂಡತಿ ಆಚೆ ಹೋದೆವು ಎಂದರೆ ಸರಿಯಲ್ಲ. ಅಲ್ಲಿ ನೋಡಲಾಗಿ, ಆರೋಪಿಯು, ಅವರ ಹೆಂಡತಿ ಮಹದೇವಮ್ಮನಿಗೆ, ಸೀಮೆಎಣ್ಣೆಯನ್ನು ಅವಳ ಮೈ ಮೇಲೆ ಎರಚಿ, ಬೆಂಕಿ ಕಡ್ಡಿ ಹಚ್ಚಿ ಓಡಿ ಹೋಗಿದ್ದು, ಅವಳ ಮೈ ಮೇಲೆ ಬೆಂಕಿ ಹರಡಿ ತಾಪ ತಾಳಲಾರದೇ ಕಿರುಚಿಕೊಳ್ಳುತ್ತಿದ್ದಳು ಎಂದರೆ ಸರಿಯಲ್ಲ. ಅಲ್ಲಿಯೆ ಇದ್ದ ಅವರ ಮಗ ಚಾಸಾ.1 ಸಿದ್ದರಾಜು ರವರು, ಅವರ ತಾಯಿಯ ಮೇಲೆ ಹತ್ತಿಕೊಂಡಿದ್ದ ಬೆಂಕಿಯನ್ನು ಆರಿಸಲು ಹೋದಾಗ ಅವರಿಗೂ ಸಹ ಬೆಂಕಿ ಜ್ವಾಲೆ ಆಗಿ, ಸುಟ್ಟು ಗಾಯಗಳು ಆಗಿದ್ದವು ಎಂದರೆ ಸರಿಯಲ್ಲ. ಮನೆಯಲ್ಲಿ ನೋಡಲಾಗಿ, ಒಂದು ದೊಣ್ಣೆಗೆ ಬಟ್ಟೆ ಸುತ್ತಿದ್ದು, ಅದಕ್ಕೆ ಸೀಮೆ ಎಣ್ಣೆ ಹಾಕಿ ಬೆಂಕಿ ಹಚ್ಚಿದ್ದು, ಅದೂ ಸಹ ಉರಿಯುತ್ತಿದ್ದು, ಅಲ್ಲಿಯೇ ಅರ್ಧ ಲೀಟರ್ ವಾಟರ್ ಬಾಟಲಿನಲ್ಲಿ, ಸೀಮೆಎಣ್ಣೆ ತಂದಿದ್ದು, ಅದು ವಾಸನೆಯಿಂದ ಕೂಡಿದ್ದು, ಬೆಂಕಿ ಕಡ್ಡಿ ಪೊಟ್ಟಣ ಕೂಡ ಸ್ಥಳದಲ್ಲಿಯೆ ಇತ್ತು ಎಂದರೆ ನಾನು ನೋಡಲಿಲ್ಲ. ನಂತರ ನಾನು ಮತ್ತು ನನ್ನ ಹೆಂಡತಿ ಸೇರಿ, ಅವರಿಬ್ಬರನ್ನು ಉಪಚರಿಸಿ, 108 ಆ್ಯಂಬುಲೆನ್ಸ್ ಗೆ ಕರೆ ಮಾಡಿ, ಮೊದಲು ಮಳವಳ್ಳಿ ಆಸ್ಪತ್ರೆ ನಂತರ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಕರೆದುಕೊಂಡು ಹೋದೆವು ಎಂದರೆ ಸರಿಯಲ್ಲ. ನಂತರ ಘಟನೆಯ ಬಗ್ಗೆ ಚಾಸಾ.1 ರವರನ್ನು ವಿಚಾರಿಸಲಾಗಿ, ಅದೇ ದಿನ ರಾತ್ರಿ 7.00 ಗಂಟೆ ಸಮಯದಲ್ಲಿ, ಚಾಸಾ 1 ಮತ್ತು ಅವರ ತಾಯಿ ಮನೆಯ ಹಾಲ್ ನಲ್ಲಿ ಕುಳಿತಿದ್ದಾಗ, ಅವರ ತಂದೆ ಆರೋಪಿತನು ಏಕಾಏಕಿ ಮನೆಗೆ ನುಗ್ಗಿ, ಬೊಳಿ ಮಕ್ಕಳೇ, ಸೂಳೆ ಮಕ್ಕಳೇ, ಅವ್ವ - ಮಗನಿಗೆ ಈ ಮನೆ ಕಟ್ಟಿ ಸಾಕಾಗಿತ್ತಾ, ಈ ಮನೆ ನನ್ನದು, ನೀವಿಬ್ಬರು ಮನೆಯಿಂದ ಹೊರಗಡೆ ಹೋಗಿ ಎಂದು ಬೈದು, ತಾನು ತಂದಿದ್ದ, ಬಟ್ಟೆ ಸುತ್ತಿಕೊಂಡಿದ್ದ ದೊಣ್ಣೆಗೆ , ವಾಟರ್ ಬಾಟಲ್ ನಲ್ಲಿ

ತಂದಿದ್ದ ಸೀಮೆಎಣ್ಣೆಯನ್ನು ಸುರಿದು, ಏನು ಎನ್ನುವಷ್ಟರಲ್ಲಿ ಅವರ ತಾಯಿಗೆ ಸೀಮೆಎಣ್ಣೆ ಸುರಿದು, ಬೆಂಕಿ ಕಡ್ಡಿ ಹಚ್ಚಿ, ಮನೆಯ ಹಿಂಭಾಗಕ್ಕೆ ಓಡಿ ಹೋದ ಎಂದರೆ ಸರಿಯಲ್ಲ. ಮುಂದುವರೆದು, ತಾನು ಬೆಂಕಿ ಆರಿಸಲು ಹೋಗಿ, ತನ್ನ ಎಡಗೈ, ಬಲಗೈ, ಮುಖ ಮತ್ತು ಕಾಲಿನ ಪಾದದ ಬಳಿ ಸುಟ್ಟ ಗಾಯಗಳಾಗಿರುವುದಾಗಿಯೂ, ತಾಯಿ ಮಹದೇವಮ್ಮ ರವರಿಗೆ, ಹಣೆ, ಕಾಲುಗಳು, ಎಡಕೈ, ಸೊಂಟದ ಬಳಿ ಸುಟ್ಟ ಗಾಯಗಳಾಗಿದ್ದು, ಅವಳು ಕಿರುಚಿಕೊಂಡಾಗ ತಾವು ಬಂದಿರುವುದಾಗಿ, ಚಾಸಾ.1 ತಿಳಿಸಿದರು ಎಂದರೆ ಸರಿಯಲ್ಲ.

2) ದಿಃ 04.08.2022 ರಂದು, ಘಟನಾ ಸಂಬಂಧ ಪೊಲೀಸರು ನನ್ನನ್ನು ವಿಚಾರಣೆ ಮಾಡಿದಾಗ, ಈಗ ಓದಿ ಹೇಳಿದಂತೆ ನಾನು ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ.9 ಎಂದು ಗುರುತಿಸಲಾಯಿತು.

3) ಘಟನೆಯ ಸಂಬಂಧ ಪೊಲೀಸರು ಸ್ಥಳ ಮಹಜರಿಗೆ ಬಂದಿದ್ದಾಗ, ನನ್ನ ಹೆಂಡತಿ ಚಾಸಾ.2 ರವರು ಕೂಡ ಆರೋಪಿಯ ಮನೆಯಲ್ಲಿ ಇದ್ದರು ಎಂದರೆ ಸರಿಯಲ್ಲ. ಅವರು ಅಲ್ಲಿ ಹಾಜರಿದ್ದು, ಪೊಲಿಸೇರಿಗೆ ಘಟನೆ ನಡೆದ ಸ್ಥಳ ಮತ್ತು ಘಟನೆಗೆ ಆರೋಪಿಯು ಬಳಸಿದ್ದ ವಸ್ತುಗಳು ಮತ್ತು ಘಟನೆಯಿಂದಾಗಿ ಸುಟ್ಟು ಹೋಗಿದ್ದ ಬಟ್ಟೆಗಳನ್ನು ಪೊಲೀಸರಿಗೆ ತೋರಿಸಿದರು ಎಂದರೆ ಸರಿಯಲ್ಲ. ಚಾಸಾ.2 ಮಹದೇವಮ್ಮ ನವರು ಸ್ಥಳದಲ್ಲಿ ಹಾಜರಿದ್ದು, ಪೊಲೀಸರಿಗೆ ಸ್ಥಳ ಮತ್ತು ಮುದ್ದೆಮಾಲುಗಳನ್ನು ತೋರಿಸುತ್ತಿರುವುದು ನಿಪಿ.8 ಫೋಟೋದಲ್ಲಿ ಸ್ಪಷ್ಟವಾಗಿ ಕಾಣುತ್ತಿದ್ದು , ಈಗ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

4) ಪೊಲೀಸರು ಸ್ಥಳ ಮಹಜರ್ ಬಂದಿದ್ದಾಗ, ಈಗ ನ್ಯಾಯಾಲಯದ ಮುಂದೆ ನನಗೆ ತೋರಿಸಿದ ಮುಮಾ.1-ವಾಟರ್ ಬಾಟಲನ್ನು, ಮುಮಾ.2 - ಬೆಂಕಿ ಕಡ್ಡಿಯ ಪೊಟ್ಟಣ, ಮುಮಾ-6 ಜರ್ಕಿನ್, ಮುಮಾ.4 -ಮೆರೂನ್ ಕಲರ್ ರವಿಕೆ ಯನ್ನು ಸಹ ಪೊಲೀಸರು ವಶಪಡಿಸಿಕೊಂಡ ಸಮಯದಲ್ಲಿ ನೋಡಿರುತ್ತೇನೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸಿದ ಮುಮಾ, 2, 4 ಮತ್ತು 6 ವಸ್ತುಗಳ ಮೇಲೆ ಅಂಟಿಸಿರುವ ಚೀಟಿಯಲ್ಲಿ ನನ್ನ ರುಜುಗಳು ಇದ್ದು, ಅವುಗಳನ್ನು ಮುಮಾ1(ಎ), ಮುಮಾ2(ಎ), ಮುಮಾ4(ಎ) ಮತ್ತು ಮುಮಾ6(ಎ) ಎಂದು ಗುರುತಿಲಾಂತುತು. ಮಹಜರ್ ಕಾಲದಲ್ಲಿ ಪೊಲೀಸರು, ನನ್ನ ಸಮ್ಮುಖದಲ್ಲಿ ವಶಪಡಿಸಿಕೊಂಡಿರುವ ಕಾರಣ ಈ ವಸ್ತುಗಳ ಮೇಲೆ ನನ್ನ ಸಹಿ ಇರುತ್ತದೆ ಎಂದರೆ ಸರಿಯಲ್ಲ.

5) ನಂತರದಲ್ಲಿ ದಿಃ 04.09.2022 ರಂದು ಪೊಲೀಸರು, ಘಟನಾ ಸಂಬಂಧ ನನ್ನನ್ನು ವಿಚಾರಣೆ ಮಾಡಿದಾಗ ಕೃತ್ಯ ನಡೆದ ಸಮಯದಲ್ಲಿ, ನಾನು ಈ ಹಿಂದೆ ನೀಡಿದ್ದ ಹೇಳಿಕೆಗಳಲ್ಲಿ ನೀಡಲಾಗಿದ್ದ ಮಾಹಿತಿಗಳೊಂದಿಗೆ ಹೆಚ್ಚುವರಿಯಾಗಿ, ನಾನು ಮತ್ತು ಚಾಸಾ.2 ರವರು ಮಾತ್ರವಲ್ಲದೇ, ನಮ್ಮ ಊರಿನ, ನಮ್ಮ ಜನಾಂಗದವರೇ ಆದ ಮನುಕುಮಾರ ಮತ್ತು ನಾರಾಯಣ ಎನ್ನುವವರು ಸಹ ಹಾಜರಿದ್ದು, ಗಾಯಾಳುಗಳನ್ನು ಉಪಚರಿಸಿದ್ದರು ಎಂದು ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಮುಂದುವರೆದು, ಚಾಸಾ.1 ಸಿದ್ದರಾಜು ರವರು, ನನಗೆ ಆರೋಪಿತನು ಕೃತ್ಯವೆಸಗಿರುವ ಬಗ್ಗೆ ಕಾರಣವನ್ನು ತಿಳಿಸಲಾಗಿ, ಆರೋಪಿತನು, ಹೊಸ ಮನೆ ಕಟ್ಟಿಸಿದ ವಿಚಾರದಲ್ಲಿ ಹಾಗೂ ಆಡುಗಳು ಆರೋಪಿತನಿಗೆ ಸೇರಬೇಕೆಂದು, ಆಗಾಗ್ಗೆ ಗಲಾಟೆ ಮಾಡುತಿದ್ದು, ಮನೆಯ ಒಳಗೆ ನುಗ್ಗಿ ಹಾಲ್ ನಲ್ಲಿ ಕುಳಿತಿದ್ದ ಮಗ ಸಿದ್ದರಾಜುಮತ್ತು ಮಹದೇವಮ್ಮ ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಮನೆ ನನ್ನದು, ಆಡುಗಳು ನನ್ನದು, ನೀವಿಬ್ಬರೂ ಮನೆಯಿಂದ ಹೊರಗೆ ಹೋಗಿ ಎಂದು, ಮಹದೇವಮ್ಮಳನ್ನು ಕೊಲೆ ಮಾಡುವ ಉದ್ದೇಶದಿಂದ ತಾನು ಜೊತೆಯಲ್ಲಿ ತಂದಿದ್ದ ಸೀಮೆಎಣ್ಣೆಯನ್ನು ಮಹದೇವಮ್ಮನ ಮೇಲೆ ಎರಚಿ, ಮುಮಾ7 - ದೊಣೆಣಗೆ ಬೆಂಕಿ ಕಡ್ಡಿಯಿಂದ ಮಹದೇವಮ್ಮಳಿಗೆ ಬೆಂಕಿ ಹತ್ತಿಸಿದಾಗ, ಚಾಸಾ.1 ರವರು ತಡೆಯಲು ಹೋಗಿ, ಅವರಿಗೂ ಸುಟ್ಟ ಗಾಯಗಳು ಆಗಿರುವುದಾಗಿ ತಿಳಿದಿದ್ದು, ಪೊಲೀಸರಿಗೆ ವಿಚಾರಣಾ ಕಾಲದಲ್ಲಿ ಆ ಬಗ್ಗೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ.10 ಎಂದು ಗುರುತಿಸಲಾಯಿತು.

6) ಮಹದೇವಮ್ಮ ರವರು ಮೃತ ಪಟ್ಟ ನಂತರ, ನಾನು ಮಳವಳ್ಳಿ ಆಸ್ಪತ್ರೆಯ ಶವಾಗಾರಕ್ಕೆ ಹೋಗಿದ್ದು, ಅಲ್ಲಿ ಪೊಲೀಸರು ನನ್ನನ್ನು ಇತರೆ ಸಾಕ್ಷಿದಾರನನ್ನಾಗಿ ವಿಚಾರಣೆ ಮಾಡಿದ್ದು, ವಿಚಾರಣಾ ಕಾಲದಲ್ಲಿ, ದಿಃ 03.08.2022 ರಂದು ಸಂಜೆ 7.00 ಗಂಟೆಯಲ್ಲಿ, ಮಹದೇವಮ್ಮ ಮತ್ತು ಅವರ ಮಗ ಚಾಸಾ.1 ಮನೆಯ ಹಾಲ್ ನಲ್ಲಿ ಕುಳಿತಿದ್ದಾಗ, ಆರೋಪಿತನ್ನು ಏಕಾಏಕಿ ಒಳಗೆ ಬಂದು, ಅವಾಚ್ಯ ಶಬ್ದಗಳಿಂದ ಬೈದು, ತಾನು ತಂದಿದ್ದ ಮುಮಾ1 ಬಾಟಲ್ ನಿಂದ ಮಹದೇವಮ್ಮ ರವರ ಮೈ ಮೇಲೆ ಸೀಮೆ ಎಣ್ಣೆ ಸುರಿದು,ಮಮಾ.2 ಬೆಂಕಿ ಪೊಟ್ಟಣದ ಕಡ್ಡಿಯಿಂದ ಮುಮಾ.7 ಕ್ಕೆ ಬೆಂಕಿ ಹಚ್ಚಿ ಅದರಿಂದ, ಮಹದೇವಮ್ಮ ರವರ ಮೇಲೆ ಬೆಂಕಿ ಹಚ್ಚಿದ್ದು, ತಡೆಯಲು ಹೋದ ಸಿದ್ದರಾಜುವಿಗೂ ಸುಟ್ಟ ಗಾಯಗಳಾಗಿ ದಿಃ 30.08.2022 ರಂದು ಮಹದೇವಮ್ಮ ಮೈಸೂರಿನ ಕೆ.ಆರ್ ಆಸ್ಪತ್ರೆಯಲ್ಲಿ ಮೃತ ಪಟ್ಟಿರುವುದಾಗಿ ಈಗ ಓದಿ ಹೇಳಿದಂತೆ

ನಾನು ಶವ ತನಿಖಾ ವರದಿಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಶವ ತನಿಖಾ ವರದಿಯನ್ನು ನಿಪಿ.11 ಎಂದು ಗುರುತಿಸಲಾಯಿತು. ಸದರಿ ಶವ ತನಿಖಾ ವರದಿಯಲ್ಲಿ ಇರುವ ಸಾಕ್ಷಿಯ ಹೇಳಿಕೆಯನ್ನು ನಿಪಿ.11(ಎ) ಎಂದು ಗುರುತಿಸಲಾಯಿತು.

7) ನಾನು ಕಳೆದ 25 ವರುಷದಿಂದ, ನಮ್ಮ ಊರಿನ ಮುಖಂಡನಾಗಿರುತ್ತೇನೆ. ಸಾಮನ್ಯವಾಗಿ ಊರಿನಲ್ಲಿ ಅಥವಾ ಊರಿನ ಜನರ ಮನೆಗಳಲ್ಲಿ ಯಾವುದೇ ಘಟನೆ ನಡೆದರೂ ಮೊದಲು ಅದನ್ನು ಊರಿನ ಮುಖಂಡರಿಗೆ ತಿಳಿಸುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನುಡಿಯುತ್ತಾರೆ, ಆದರೆ ಈ ಪ್ರಕರಣದಲ್ಲಿ ನನಗೆ ಸದರಿ ಘಟನೆ ಬಗ್ಗೆ ಯಾವುದೇ ವಿಷಯವನ್ನು ತಿಳಿಸಿರಲಿಲ್ಲ ಎಂದು. ಈ ಘಟನಗೆ ಸಂಬಂಧಪಟ್ಟಂತೆ, ಹಿಂದಿನ ದಿನಗಳಲ್ಲಿ, ಆರೋಪಿತನು ಹೊಸ ಮನೆ ಕಟ್ಟಿಸಿದ ವಿಚಾರದಲ್ಲಿ ಮತ್ತು ಆಡುಗಳ ವಿಚಾರದಲ್ಲಿ ಮನೆಯಲ್ಲಿ ನಡೆಯುತ್ತಿದ್ದ ಗಲಾಟೆಯನ್ನು, ಆರೋಪಿ ಮಗನಾದ ಚಾಸಾ.1 ರವರು ನನಗೆ ತಿಳಿಸಿರಲಿಲ್ಲ ಎಂದರೆ ಸರಿ. ಆ ಕಾರಣದಿಂದ, ನಾನು ಸಿದ್ದೇಗೌಡರ ಮಗ ಸಿದ್ದರಾಜುವಿಗೆ ಏನೇ ತೊಂದರೆಗಳಾದರೂ ನಾನು ಅದರಲ್ಲಿ ಏನು ಅಭಿಪ್ರಾಯವನ್ನು ಕೊಡುವುದಿಲ್ಲ ಎಂದು ತೀರ್ಮಾನ ಮಾಡಿಕೊಂಡಿದ್ದೆನು ಎಂದರೆ ಸರಿ. ಆರೋಪಿ ಸಿದ್ದೇಗೌಡರ ಮಗ ಸಿದ್ದರಾಜು, ನಮ್ಮ ಗ್ರಾಮದವರ ಜೊತೆ ಏನು ಸಂಬಂಧ ಇಟ್ಟುಕೊಂಡಿರಲಿಲ್ಲ ಎಂದರೆ ಸರಿ. ಆ ಕಾರಣದಿಂದ, ಆ ದಿನ ಮಹದೇವಮ್ಮನವರಿಗೆ ಸಿದ್ದೇಗೌಡರರು, ಬೆಂಕಿ ಹಚ್ಚಿದಾಗ ಚಾಸಾ.1 ರವರು ದೂರು ನೀಡಿದ್ದು, ಅವರಿಗೆ ನಾನು ಸಹಕಾರ ನೀಡಲಿಲ್ಲ ಎಂದರೆ ಸರಿಯಲ್ಲ. ಆ ದಿನ ಮಹದೇವಮ್ಮ ಮತ್ತು ಸಿದ್ದರಾಜು ಸುಟ್ಟ ಗಾಯಗಳಿಂದ ನರಳುತ್ತಿದ್ದುದನ್ನು ನೋಡಿ, ನಾನು ಮತ್ತು ನನ್ನ ಹೆಂಡತಿ ಚಾಸಾ.2, ಆ್ಯಂಬುಲೆನ್ಸ್ ನ್ನು ಕರೆಸಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರೂ ಕೂಡ ಚಾಸಾ.1 ರವರ ಮೇಲಿನ ದ್ವೇಷದಿಂದ ಈಗ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**(ಬೆಳಗಿನ ಕಲಾಪದ ಅವಧಿ ಮುಗಿದಿದ್ದರಿಂದ, ಪಾಟೀ ಸವಾಲಿಗೆ ಮಧ್ಯಾಹ್ನಕ್ಕೆ ಮುಂದೂಡಲಾಯಿತು.)**

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.

ದಿನಾಂಕ ಃ 22.11.2024 ರಂದು ಸಾಕ್ಷಿಗೆ ಮಧ್ಯಾಹ್ನ ಪ್ರಮಾಣ ವಚನ ಬೋದಿಸಲಾಗಿದೆ.

**ಪಾಟೀ ಸವಾಲು ಃ ಆರೋಪಿ ಪರ ಶ್ರೀ ಬಿ ಕೆ ಜಿ (ಎಲ್ ಎ ಡಿ ಸಿ ) ವಕೀಲರಿಂದ ಃ**

1) ನಾನು ಘಟನಾ ಸ್ಥಳಕ್ಕೆ ಹೋಗುವಷ್ಟರಲ್ಲಿ, ಮಹದೇವಮ್ಮ ರವರನ್ನು ಆಸ್ಪತ್ರೆಗೆ ಎತ್ತಿಕೊಂಡು ಹೋಗಿದದ್ದರಿಂದ, ಅಲ್ಲಿ ಏನು ಘಟನೆ ನಡೆದಿತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿದ ದಿನಾಂಕವನ್ನು ಹೇಳಲು ಆಗುವುದಿಲ್ಲ. ನ್ಯಾಯಾಲಯದ ಮುಂದೆ ಮುಮಾ.1 ರಿಂದ 7 ವಸ್ತುಗಳನ್ನು ಪೊಲೀಸರು, ನನ್ನ ಮುಂದೆ ಸ್ಥಳದಿಂದ ತೆಗೆದುಕೊಂಡಿರಲಿಲ್ಲ ಎಂದರೆ ಸರಿ. ಮಹಜರ್ ಗೆ ನಾನು ಸ್ಥಳದಲ್ಲಿ ಸಹಿ ಮಾಡಿರಲಿಲ್ಲ ಹಾಗೂ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮಹಜರ್ ನಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.7 ಮತ್ತು 8 ಪೋಟೋಗಳನ್ನು, ನಾನು ಮತ್ತು ಪೊಲೀಸರು ಸೃಷ್ಟಿಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ** ಇರುವುದಿಲ್ಲ.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.